# ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ ಅಫಜಲಪೂರ

## ಸಿಸಿ ನಂ. **265/2018**

ಚಾಸಾ-4 ಪ್ರಾಸಾ-2

ಸತ್ಯ ಪ್ರತಿಜ್ಞೆಯ ಮೇರೆಗೆ ಪ್ರಮಾಣಿಕೃತ ಹೇಳಿಕೆ
ಪಡೆದುಕೊಳ್ಳಲಾಯಿತು.
ದಿನಾಂಕ: 27-10-2025

| | | |
|---|---|---|
| ಹೆಸರು | : | ಸಿದ್ದಾರಾಮ |
| ತಂದೆಯ ಹೆಸರು | : | ಭೋಜಪ್ಪ |
| ವಯಸ್ಸು | : | 55 ವರ್ಷ |
| ಉದ್ಯೋಗ | : | ಒಕ್ಕಲುತನ |
| ವಾಸಸ್ಥಳ | : | ರಾಮನಗರ |

-: **ಮುಖ್ಯ ವಿಚಾರಣೆ :- ಮಾನ್ಯ ಸಹಾಯಕ ಸರ್ಕಾರಿ ಅಭಿಯೋಜಕರವರಿಂದ :-**

ಚಾಸಾ 5 ಪರಿಚಯ ಇರುತ್ತಾರೆ.

ಸಾಕ್ಷಿಗೆ ಗುನ್ನೆ ಸ್ಥಳ ಪಂಚನಾಮೆ ತೋರಿಸಿದ್ದು ಸಾಕ್ಷಿ ಅದರಲ್ಲಿ ತನ್ನ ಸಹಿ ನೋಡಿ ಗುರುತಿಸಿದ್ದು ಗುನ್ನೆ ಸ್ಥಳ ಪಂಚನಾಮೆಯನ್ನು ನಿಪಿ **10** ಎಂದು ಮತ್ತು ಸಾಕ್ಷಿ ಸಹಿಯನ್ನು ನಿಪಿ **10**(ಎ) ಎಂದು ಗುರುತಿಸಲಾಯಿತು.

ಒಂದು ದಿನ ಹೊಲದಲ್ಲಿ ನೀರು ಹಾಯಿಸುತ್ತಿದ್ದಾಗ ದಡಲ ಅಂತ ಶಬ್ದ ಕೇಳಿಸಿದ್ದರಿಂದ ಓಡಿಬಂದಾಗ ಜನರೆಲ್ಲರೂ ಓಡಿಹೋಗಿದ್ದರು. ನಾವು ದೂರ ನಿಂತು ನೋಡಿ ಬಂದಿರುತ್ತೇವೆ.

ಆ ದಿನ ಪೋಲಿಸರು ಪಂಚನಾಮೆಗೆ ಬಂದಾಗ ಸಹಿ ಪಡೆದಿರುತ್ತಾರೆ.

(ಈ ಹಂತದಲ್ಲಿ ಸ.ಸ.ಅ ರವರು ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟೀಸವಾಲಿಗೆ ಅನುಮತಿ ಕೋರಿರುತ್ತಾರೆ, ಅನುಮತಿ ನೀಡಲಾಯಿತು)

<u>ಪಾಟೀ ಸವಾಲುಃ ಸ.ಸ.ಅ. ರವರಿಂದ</u>

ದಿಃ 28-05-2017 ರಂದು ಸಾಯಂಕಾಲ 5 ರಿಂದ 6 ಗಂಟೆಯವರೆಗೆ ಪೋಲಿಸರು ನನ್ನ ಮತ್ತು ಚಾಸಾ 5 ರವರ ಗುನ್ನೆ ಸ್ಥಳ ಪಂಚನಾಮೆ ಜರುಗಿಸಿ ಒಂದು ಪಲ್ಸರ ಮೋಟರ ಸೈಕಲ ಮತ್ತು ಒಂದು ಕ್ರೂಸರ ವಾಹನವನ್ನು ಜಪ್ತಿ ಪಡಿಸಿಕೊಂಡಿರುತ್ತಾರೆ ಎಂದರೆ ಸರಿ.

ಸಾಕ್ಷಿಗೆ ಅಪಘಾತಕ್ಕೊಳಪಟ್ಟ ಮತ್ತು ಅಪಘಾತಪಡಿಸಿತು ಎಂದು ಹೇಳುವ ಮೋಟರ ಸೈಕಲ ಮತ್ತು ಕ್ರೂಸರ ವಾಹನ ಭಾವಚಿತ್ರಗಳನ್ನು ಸಾಕ್ಷಿಗೆ ತೋರಿಸಿದ್ದು ಸಾಕ್ಷಿಯೂ ಅವುಗಳನ್ನು ನೋಡಿ ಗುರುತಿಸಿದ್ದು ಅವುಗಳನ್ನು ಈಗಾಗಲೇ ನಿಪಿ **2** ರಿಂದ **9** ಎಂದು ಗುರುತಿಸಲಾಯಿತು.

<u>ಪಾಟೀ ಸವಾಲುಃ ಆರೋಪಿ ಪರ ಶ್ರೀ **SGH** ವಕೀಲರಿಂದಃ-</u>

ನಿಪಿ 10 ರ ವಿಷಯ ನನಗೆ ಗೊತ್ತಿಲ್ಲ ಎಂದರೆ ಸರಿ. ಪೋಲಿಸರ ಕೋರಿಕೆಯ ಮೇರೆಗೆ ಸಹಿ ಮಾಡಿರುತ್ತೇನೆ ಎಂದರೆ ಸರಿ.

<u>ಮರು ವಿಚಾರಣೆಃ - ಇಲ್ಲ.</u>

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸರಿ ಇದೆ

ಸಿವಿಲ್ & ಪ್ರ.ದ.ನ್ಯಾ. ದಂಡಾಧಿಕಾರಿಗಳು
ಅಫಜಲಪೂರ